UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Friday
14-08-2026

ಅಡುಗೆ ಎಣ್ಣೆ ಆಮದು ಶೇ. 8 ಇಳಿಕೆ

ನವದೆಹಲಿ: ಭಾರತದ ಅಡುಗೆ ಎಣ್ಣೆ ಆಮದು ಜುಲೈನಲ್ಲಿ ಶೇ. 8ರಷ್ಟು ಇಳಿಕೆಯಾಗಿದ್ದು, 14.81 ಲಕ್ಷ ಟನ್‌ಗೆ ತಲುಪಿದೆ ಎಂದು ಸಾಲ್ವೆಂಟ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ತಿಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ 16.16 ಲಕ್ಷ ಟನ್ ಆಮದಾಗಿತ್ತು. ಪ್ರಸಕ್ತ ತೈಲವರ್ಷದ ಮೊದಲ 9 ತಿಂಗಳಲ್ಲಿ (ನವೆಂಬರ್-ಜುಲೈ) ಒಟ್ಟು ಅಡುಗೆ ಎಣ್ಣೆ ಆಮದು ಶೇ. 5ರಷ್ಟು ಏರಿಕೆಯಾಗಿ 119.23 ಲಕ್ಷ ಟನ್‌ಗೆ ತಲುಪಿದೆ. ಇದರಲ್ಲಿ ಶುದ್ಧೀಕರಿಸಿದ ಎಣ್ಣೆಯ ಪಾಲು ಶೇ. 14ರಿಂದ ಶೇ. 4ಕ್ಕೆ ಇಳಿಕೆಯಾಗಿದ್ದು, ಕಚ್ಚಾ ಎಣ್ಣೆಯ ಪಾಲು ಶೇ. 96ಕ್ಕೆ ಏರಿದೆ. ದೇಶದ ಒಟ್ಟು ಅಡುಗೆ ಎಣ್ಣೆ ಬೇಡಿಕೆಯ ಶೇ. 60ರಷ್ಟನ್ನು ಆಮದಿನ ಮೂಲಕವೇ ಪೂರೈಸಲಾಗುತ್ತದೆ.

Vijayavani pg 03

ಬೆಳೆಗಾರರ ಹಿತರಕ್ಷಣೆಯೇ ನಮ್ಮ ಬದ್ಧತೆ ಎಂದ ಅಡಕೆ ಸಹಕಾರ ಸಂಸ್ಥೆಗಳು

ಗುಟ್ಕಾ ನಿಷೇಧದಿಂದ ಅಡಕೆಗೆ ಏನೂ ಆಗಲ್ಲ

■ **ಸುಧಾಕರ ಸುವರ್ಣ** ಪುತ್ತೂರು (ದಕ್ಷಿಣ ಕನ್ನಡ)
Sudhakara.kannadamoole@timesofindia.com

ತಂಬಾಕು ಮತ್ತು ನಿಕೋಟಿನ್ ಅಂಶವಿರುವ ಗುಟ್ಕಾ ಹಾಗೂ ಪಾನ್ ಮಸಾಲಗಳ ಬಳಕೆ ಮತ್ತು ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಲು ರಾಜ್ಯ ಸರಕಾರ ಮುಂದಾಗಿರುವ ಬೆನ್ನಲ್ಲೇ, ಅಡಕೆ ಬೆಳೆಗಾರರಲ್ಲಿ ಸಣ್ಣದಾದ ಗೊಂದಲ ಮೂಡಿರುವುದು ಸಹಜ. ಆದರೆ, 'ಗುಟ್ಕಾ ನಿಷೇಧವೆಂದರೆ ಅಡಕೆ ನಿಷೇಧವಲ್ಲ' ಎಂಬುದು ಕೆಲವು ಬೆಳೆಗಾರರಿಗೆ ಮನವರಿಕೆಯಾಗಿದ್ದು, ಪ್ರಮುಖ ಅಡಕೆ ಸಂಸ್ಥೆಗಳು ಮತ್ತು ತಜ್ಞರು ನೀಡಿರುವ ಧೈರ್ಯದ ಮಾತುಗಳು ಅಡಕೆ ಬೆಳೆಗಾರರ ಆತಂಕವನ್ನು ಸ್ವಲ್ಪಮಟ್ಟಿಗೆ ದೂರಗೊಳಿಸಿವೆ. ಅಡಕೆ ಮಾರುಕಟ್ಟೆ ಹಾಗೂ ಧಾರಣೆ ಮೇಲೆ ಈ ನಿರ್ಧಾರದಿಂದ ಯಾವುದೇ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ ಎಂಬ ಭರವಸೆ ಮೂಡಿದೆ.

ಕರಾವಳಿಯಲ್ಲಿ ಬೆಳೆಯುವ 'ಚಾಲಿ ಅಡಕೆ', ಮಲೆನಾಡು ಮತ್ತು ಬಯಲುಸೀಮೆಯ 'ಕೆಂಪಡಕೆ'ಯ ಪ್ರಮುಖ ಗ್ರಾಹಕರು ಗುಜರಾತ್ ಮತ್ತು ಉತ್ತರ ಪ್ರದೇಶ ಸೇರಿದಂತೆ ಉತ್ತರ ಭಾರತೀಯರು. ರಾಜ್ಯದಲ್ಲಿ ಉತ್ಪಾದನೆಯಾಗುವ ಒಟ್ಟು ಅಡಕೆಯ ಶೇ. 80ರಷ್ಟು ಭಾಗ ಉತ್ತರ ಭಾರತಕ್ಕೆ ರಫ್ತಾಗುತ್ತದೆ. ಅಡಕೆಯ ಮೌಲ್ಯವರ್ಧನೆ ಕ್ಷೇತ್ರದಲ್ಲೂ ದೊಡ್ಡಮಟ್ಟದ ಪ್ರಗತಿಯಾಗಲು ಅವಕಾಶವಿದ್ದರೂ, ಇಂದಿಗೂ ಶೇ. 99ರಷ್ಟು ಅಡಕೆ ಜಗಿದು ಉಗಿಯುವ (ಪಾನ್ ಹವ್ಯಾಸ) ರೂಪದಲ್ಲೇ ಬಳಕೆಯಾಗುತ್ತಿದೆ. ಉತ್ತರ ಭಾರತದ ಜನರ ಅಪಾರ ಅಡಕೆ ಜಗಿಯುವ ಹವ್ಯಾಸವೇ ದೇಶದ ಅಡಕೆ ಮಾರುಕಟ್ಟೆಯನ್ನು ಇಷ್ಟು ದಶಕಗಳಿಂದ ಅತ್ಯಂತ ಭದ್ರವಾಗಿ ಮತ್ತು ಸದೃಢವಾಗಿ ಉಳಿಸಿಕೊಂಡು ಬಂದಿದೆ.



ಜಿಎಸ್‌ಟಿಗೆ ಅಡಕೆಯಿಂದ ಭಾರಿ ಕಾಣಿಕೆ

- ಅಡಕೆಯು ಕೃಷಿ ಹಾಗೂ ವಾಣಿಜ್ಯ ಉತ್ಪನ್ನವಾಗಿ ಆರ್ಥಿಕತೆಗೆ ಭಾರಿ ಕೊಡುಗೆ ನೀಡುತ್ತಿದೆ
- ಕರ್ನಾಟಕದಲ್ಲಿ ಅಡಕೆ ಸಂಬಂಧಿತ ಜಿಎಸ್‌ಟಿ ಸಂಗ್ರಹವು 2025-26ನೇ ಸಾಲಿನಲ್ಲಿ 379.34 ಕೋಟಿ ರೂ. ಇತ್ತು.
- ಪ್ರಸ್ತುತ ಸಾಲಿನ ಮೊದಲ ತ್ರೈಮಾಸಿಕದಲ್ಲೇ ಅಡಕೆಯಿಂದ 90.21 ಕೋಟಿ ರೂ. ಜಿಎಸ್‌ಟಿ ಹರಿದುಬಂದಿದೆ.

ಸರಕಾರ ಖಾತ್ರಿ ನೀಡಲಿ !

ರಾಜ್ಯದ 60 ಲಕ್ಷ ಕುಟುಂಬಗಳು ಅಡಕೆ ಬೆಳೆಯನ್ನೇ ನಂಬಿವೆ. ಸರಕಾರದ ಬೊಕ್ಕಸಕ್ಕೆ ಅಡಕೆಯಿಂದ ಕೋಟಿಗಟ್ಟಲೆ ತೆರಿಗೆ ಬರುತ್ತಿದೆ. ಹೀಗಿರುವಾಗ ಅಡಕೆ ಬೆಳೆಗಾರರ ಹಿತರಕ್ಷಣೆ ಸರಕಾರದ ಹೊಣೆ. ಗುಟ್ಕಾ ನಿಷೇಧವೆಂದರೆ ಅಡಕೆ ನಿಷೇಧವಲ್ಲ ಎಂದು ಸರಕಾರ ಹೇಳಬೇಕು. ಸರಕಾರದ ನಿರ್ಧಾರ ಅಡಕೆ ಬೆಳೆಗಾರರ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳಬೇಕು.

-ಮಹೇಶ್ ಪುಚ್ಚಪ್ಪಾಡಿ ಅಧ್ಯಕ್ಷ
ಅಖಿಲ ಭಾರತ ಅಡಕೆ ಬೆಳೆಗಾರರ ಸಂಘ

ತಂಬಾಕು ಉತ್ಪನ್ನಗಳ ನಿಷೇಧದಿಂದ ಅಡಕೆ ಬೆಳೆಗಾರರು ಬಲಿಪಶುವಾಗದಂತೆ ಸರಕಾರ ಖಾತರಿಪಡಿಸಬೇಕು. ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಸರಕಾರದ ಉದ್ದೇಶವನ್ನು ಗೌರವಿಸುತ್ತೇವೆ. ಅಡಕೆ ಬೆಳೆಗಾರರ ಕಾನೂನುಬದ್ಧ ವ್ಯಾಪಾರದ ಹಿತಾಸಕ್ತಿಗೆ ಧಕ್ಕೆಯಾಗದಂತೆ ಸರಕಾರ ನೋಡಿಕೊಳ್ಳಬೇಕು.

-ಎಸ್.ಆರ್. ಸತೀಶ್ಚಂದ್ರ ಅಧ್ಯಕ್ಷ, ಕ್ಯಾಂಪ್ಕೋ

V-karnataka pg 05

Three new frog species discovered in NE, East

KALYAN RAY
NEW DELHI, DHNS



Amolops ammachi



Amolops sendenyu



Amolops bella

Indian frog hunters have discovered three new cascade frog species from the fast-flowing streams of Tripura, Nagaland and West Bengal, while reporting for the first time the occurrence of five other species previously not known to India.

The discovery not only sheds light on the diversity of amphibians in India and across Asia but also clearly points to the richness of Indian forests in flora and fauna.

Cascade frogs are vital ecological anchors that connect aquatic and terrestrial food webs, control pest populations, and serve as sensitive indicators of clean water ecosystems.

The three newly discovered frogs are classified in the genus Amolops, a group that comprises around 100 species widely distributed across Asia. Their common name refers to their typical habitat in and around rocky waterfalls found in forest hill streams.

A team led by SD Biju from Delhi University conducted extensive fieldwork over 15 years spanning all of the North East, documenting more than 300 geographic populations of Cascades frogs.

Subsequent DNA analysis and morphological comparisons of adults and tadpoles established that three populations from the three states represent new species.

"Our study reaffirms that many Indian faunal groups remain poorly studied and contain undiscovered biodiversity, especially in the lesser explored northeastern states," said Biju.

One of the new species, Ammachi's Cascade Frog (*Amolops ammachi*), was discovered in Jampui Hills in Tripura. It is named after late Padmini Varkey, a renowned social worker and philanthropist from Kerala, who was fondly referred to as "Ammachi," or "mother" in Malayalam.

The two other species — Sendenyu Cascade Frog (*Amolops sendenyu*) and Beautiful Cascade Frog (*Amolops bella*) — were discovered in Nagaland and West Bengal, respectively.

Dec Hrd pg 07B

ವಿ ರೈತ ಮಿತ್ರ



■ ಪಶುಸಂಗೋಪನೆಯಲ್ಲಿ ಚಾಯಾ ಮಾನಸ ಬೆಳೆಯ ಉಪಯೋಗಗಳ ಬಗ್ಗೆ ಮಾಹಿತಿ ನೀಡಿ.

। ಪ್ರಭುದೇವ ಚಿತ್ರದುರ್ಗ

ಚಾಯಾ ಮಾನಸ ಎಂಬುದು ವೇಗವಾಗಿ ಬೆಳೆಯುವ, ಪೌಷ್ಟಿಕಾಂಶಭರಿತ, ಬಹು ವಾರ್ಷಿಕ ಪೊದೆಸಸ್ಯವಾಗಿದೆ. ಕೊಟ್ಟಿಗೆ ಆಧಾರಿತ ಪಶುಸಂಗೋಪನೆಗೆ ಇದು ಸೂಕ್ತವಾದ ಹಸಿರು ಮೇವಿನ ಪರ್ಯಾಯ ವಾಗಿದೆ. ಒಣಗಿದ ಎಲೆಗಳಲ್ಲಿ ಶೇ.20 ರಿಂದ 25ರಷ್ಟು ಕಚ್ಚಾ ಪ್ರೋಟೀನ್, ಕ್ಯಾಲ್ಸಿಯಂ, ಕಬ್ಬಿಣ, ಪೊಟ್ಯಾಶಿಯಂ ಮತ್ತು ಜೀವಸತ್ವ ಎ ಮತ್ತು ಸಿಗಳು ಸಮೃದ್ಧವಾಗಿ ಇರುವುದರಿಂದ ಹಿಂಡಿ ಅಥವಾ ಪೂರಕ ಆಹಾರಗಳಿಗೆ ಉತ್ತಮ ಪರ್ಯಾಯವಾಗಿದೆ. ಹಸುಗಳು ಮತ್ತು ಮೇಕೆಗಳಿಗೆ ನೀಡುವುದರಿಂದ ಹಾಲಿನ ಗುಣಮಟ್ಟ ಮತ್ತು ಉತ್ಪಾದನೆ ಹೆಚ್ಚುತ್ತದೆ. ಆದಾಗೂ ಹಸಿ ಎಲೆಗಳಲ್ಲಿ 'ಹೈಡ್ರೋಸಯಾನಿಕ್ ಗ್ಲೈಕೋಸೈಡ್ಸ್' ಎಂಬ ಲಘು ವಿಷಕಾರಿ ಅಂಶವಿರುವುದರಿಂದ ಎಲೆಗಳನ್ನು ಕೊಯ್ದು, ನೆರಳಿನಲ್ಲಿ 2-3 ದಿನ ಒಣಗಿಸಿ ಅಥವಾ ಸಣ್ಣದಾಗಿ ಕತ್ತರಿಸಿ ಬಿಸಿಲಿನಲ್ಲಿ ಒಣಗಿಸುವುದರಿಂದ ವಿಷಕಾರಿ ಅಂಶ ಸಂಪೂರ್ಣವಾಗಿ ಕಡಿಮೆಯಾಗುತ್ತದೆ. ಹೀಗೆ ಒಣಗಿಸಿದ ಶೇ.20 ರಿಂದ 30ರಷ್ಟು ಚಾಯಾ ಎಲೆಗಳನ್ನು ದಿನನಿತ್ಯದ ಹಸಿರು ಮೇವಿನ ಜೊತೆಗೆ ಬೆರೆಸಿ ನೀಡಬಹುದು. ಇದು ಬರ ನಿರೋಧಕವಾಗಿದೆ ಆದುದರಿಂದ ಕಡಿಮೆ ನೀರಿನಲ್ಲಿ, ಸಾಧಾರಣ ಮಣ್ಣಿನಲ್ಲೂ ಚೆನ್ನಾಗಿ ಬೆಳೆಯುತ್ತದೆ. ಇದರ ಬಲಿತ ಕಾಂಡದ ತುಂಡುಗಳನ್ನು ಮಣ್ಣಿನಲ್ಲಿ ನೆಡುವುದರಿಂದ ಸುಲಭವಾಗಿ ತೋಟದ ಸುತ್ತ ಬದುಗಳಲ್ಲಿ ಹಾಗು ಬೇಲಿ ಸಸ್ಯವಾಗಿಯೂ ಬೆಳೆಸಬಹುದು.

। ಡಾ. ಪ್ರಮೀಳಾ ಸಿ.ಕೆ. ಸಹಾಯಕ ಪ್ರಾಧ್ಯಾಪಕರು, ಬೀಜ ವಿಜ್ಞಾನ

ರೈತರ ಸಮಸ್ಯೆಗಳಿಗೆ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು. ಇಲ್ಲಿನ ತಜ್ಞರು ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 18004250571/ 080-23627889 ಸಂಖ್ಯೆಗೆ ಕರೆ ಮಾಡಿ ತಿಳಿಸಿ ಅಥವಾ 94824 77812 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ

Vijayavani Pg 07

ಅಡಕೆ ಧೃತಿಗೆಡುವ ಅಗತ್ಯವಿಲ್ಲ

■ ಟಿ.ಆರ್. ಶ್ರೀಧರ್



ಇತ್ತೀಚೆಗೆ ಸರಕಾರ ಹೊರಡಿಸಿರುವ ತಂಬಾಕು ಮತ್ತು ಗುಟ್ಕಾ ನಿಷೇಧದ ಆದೇಶ ಹಾಗೂ ಭಾರತೀಯ ಆಹಾರ ಭದ್ರತೆ ಮತ್ತು ಗುಣಮಟ್ಟ ಪ್ರಾಧಿಕಾರ ತಂದಿರುವ ಪ್ಯಾಕೇಜಿಂಗ್ ನಿಯಮಗಳ ಬದಲಾವಣೆಯಿಂದ ಅಡಕೆ ಬೆಳೆಗಾರರು ಆತಂಕಪಡುವ ಅಗತ್ಯವಿಲ್ಲ. ಮಾರುಕಟ್ಟೆಯ ವಾಸ್ತವಾಂಶ, ಕಾನೂನಿನ ಸ್ವರೂಪ ಅರ್ಥಮಾಡಿಕೊಂಡರೆ ಅಡಕೆ ಉದ್ಯಮ ಎಷ್ಟು ಸುರಕ್ಷಿತವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಎಫ್‌ಎಸ್‌ಎಸ್‌ಎಐ ಕಾಯಿದೆಯಡಿ ಪ್ರತಿವರ್ಷ ತೆಂಬಾಕು ಮತ್ತು ನಿಕೋಟಿನ್ ಮಿಶ್ರಿತ ಗುಟ್ಕಾ ಹಾಗೂ ಪಾನ್ ಮಸಾಲಾ ಮೇಲೆ ವರ್ಷದ ಮಟ್ಟಿನ ನಿಷೇಧ ಹೇರುವ ಪ್ರಸ್ತಾವ ಕಾನೂನಾತ್ಮಕ ಹಾಗೂ ನಿಯಮಿತ ಪ್ರಕ್ರಿಯೆ. ಶಾಶ್ವತ ನಿಷೇಧಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಹಲವು ವರ್ಷಗಳಿಂದ ಈ ಪ್ರಕ್ರಿಯೆ ನಡೆಯುತ್ತಲೇ ಇದ್ದರೂ ಅಡಕೆ ಮಾರುಕಟ್ಟೆ ಸ್ಥಿರವಾಗಿಯೇ ಮುಂದುವರಿದಿದೆ. ಇದೇ ರೀತಿಯಲ್ಲಿ ಎಫ್‌ಎಸ್‌ಎಸ್‌ಎಐ ಮತ್ತು ಆರ್‌ಎಸ್‌ಪಿ ನಿಯಮಗಳಡಿ ಪಾನ್ ಮಸಾಲಾ ಪ್ಯಾಕೆಟ್‌ಗಳಿಗೆ ಬಂದಿರುವ ಬದಲಾವಣೆಗಳೂ ಅಡಕೆ ಬೆಳೆಗಾರರು ಆತಂಕಪಡುವಂತಹ ವಿಷಯವಲ್ಲ.

ವಿಕ ಪ್ರಸ್ತುತ



ಪ್ಲಾಸ್ಟಿಕ್ ಮತ್ತು ಅಲ್ಯೂಮಿನಿಯಂ ಫಾಯಿಲ್ ಬದಲಿಗೆ ಕಾಗದ, ಗ್ಲಾಸ್ ಅಥವಾ ಇತರ ಪರಿಸರಸ್ನೇಹಿ ಸಾಮಗ್ರಿಗಳಲ್ಲಿ ಪ್ಯಾಕ್ ಮಾಡಲು ಸೂಚಿಸಿರುವುದು ಪರಿಸರ ಕಾಳಜಿಯ ದೃಷ್ಟಿಯಿಂದ ಬಂದ ನಿಯಮ. ಸಣ್ಣಸಣ್ಣ ಸಾಚೆಗಳಿಗೂ ಕಡ್ಡಾಯವಾಗಿ ಬೆಲೆ ಮತ್ತು ವಿವರ ಮುದ್ರಿಸುವ ನಿಯಮವು ಚಿಲ್ಲರೆ ಮಾರಾಟ ಬೆಲೆ ಹಾಗೂ ಜಿಎಸ್ಟಿ ಪಾರದರ್ಶಕತೆಗಾಗಿ ತಂದಿರುವ ಕ್ರಮ. ಇದು ಉತ್ಪನ್ನದ ಮೇಲಿನ ನಿಷೇಧವಲ್ಲ. ಇದರಿಂದ ಕಂಪನಿಗಳು ತಮಗೆ ಬೇಕಾದ ಕಚ್ಚಾವಸ್ತು ಅಂದರೆ ಅಡಕೆ ಖರೀದಿಯನ್ನು ನಿಲ್ಲಿಸುವುದಿಲ್ಲ. ಮಾರುಕಟ್ಟೆಯ ಗಟ್ಟಿ ಅಂಕಿಅಂಶ ಗಮನಿಸಿದರೆ ಅಡಕೆ ಬೇಡಿಕೆ ಬಲವಾಗಿಯೇ ಇದೆ. ಭಾರತದಲ್ಲಿ ವರ್ಷಕ್ಕೆ ಸರಾಸರಿ 12 ಲಕ್ಷದಿಂದ 13 ಲಕ್ಷ ಮೆಟ್ರಿಕ್ ಟನ್ ಅಡಕೆ ಉತ್ಪಾದನೆಯಾಗುತ್ತಿದ್ದು, ದೇಶೀಯ ಮಾರುಕಟ್ಟೆಯಲ್ಲಿ ಇದರ ಬಳಕೆ ಶೇ. 95ಕ್ಕಿಂತ ಹೆಚ್ಚಿದೆ. ಅಡಕೆಯ ಬಳಕೆ ಕೇವಲ ಪಾನ್ ಮಸಾಲಾಗೆ ಮಾತ್ರ ಸೀಮಿತವಲ್ಲ; ಧಾರ್ಮಿಕ ಕಾರ್ಯಗಳು, ಸಾಂಪ್ರದಾಯಿಕ ತಾಂಬೂಲ, ಔಷಧೀಯ ವಲಯ ಮತ್ತು ಸಂಸ್ಕರಿಸಿದ ಇತರ ಉತ್ಪನ್ನಗಳಿಗೆ ನಿರಂತರ ಬೇಡಿಕೆ ಇದೆ. ಪಾನ್ ಮಸಾಲಾ ಹಾಗೂ ಸಂಸ್ಕರಣಾ ಉದ್ಯಮಗಳು ಕನಿಷ್ಠ 6ರಿಂದ 12 ತಿಂಗಳ ದಾಸ್ತಾನು ಇಟ್ಟುಕೊಳ್ಳುವುದರಿಂದ ಇಂತಹ ಕಾನೂನಾತ್ಮಕ ಬದಲಾವಣೆಗಳು ದೈನಂದಿನ ಅಡಕೆ ದರದ ಮೇಲೆ ತೀವ್ರ ಪರಿಣಾಮ ಬೀರುವುದಿಲ್ಲ.

(ಲೇಖಕರು: ಅಡಕೆ ಮಾರುಕಟ್ಟೆ ತಜ್ಞರು)

V-karnataka Pg 05